**ಸಾಕ್ಷಿಯನ್ನು ದಿಃ24.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.

2. ನನಗೆ ಇಂಗ್ಲೀಷ್ ಓದಲು ಬರುವುದಿಲ್ಲ.

3. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನು ಹೇಳಿದಂತೆ ಬರೆಯಲಾಗಿದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಪೂರ್ಣ ವಿವರಗಳು ನನಗೆ ಗೊತ್ತಿದೆ.

4. ನಿಮಗೆ ಹಾಗೂ ಗೌರಮ್ಮ ನವರಿಗೆ ಮಾತುಕತೆ ಇಲ್ಲ ಎಂದರೆ ಸರಿಯಲ್ಲ.

5. ಸ್ವಾಮಿನಾಯಕ ಹಾಗೂ ನೀವು ಚೆನ್ನಾಗಿದ್ದೀರಾ ಎಂದರೆ ಸರಿ.

6. ನಿಮ್ಮ ಮೇಲೆ ಗೌರಮ್ಮನ ಮನೆಯವರು ದೂರು ನೀಡಿ ಸಿಆರ್.21/2019 ರಂತೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿ.

7. ನಿವೇಶನದ ವಿಚಾರದಲ್ಲಿ ಸ್ವಾಮಿನಾಯಕರ ಜೊತೆ ನೀವು ಸಹ ತೊಂದರೆ ಕೊಡುತ್ತಿದ್ದೀರಿ ಎಂದು ದೂರು ನೀಡಿದ್ದರು ಎಂದರೆ ಸರಿ.

8. ನಿಮ್ಮ ಜನ್ಮ ದಿನಾಂಕ ಗೊತ್ತಾ ಎಂದರೆ, 1983 ರಲ್ಲಿ ಹುಟ್ಟಿದ್ದೇನೆ. 1999 ರಲ್ಲಿ ನಿಮಗೆ ಇನ್ನೂ 18 ವರ್ಷ ಆಗಿರಲಿಲ್ಲ ಎಂದರೆ ಸರಿ. ನೀವು ಮೈನರ್ ಆಗಿದ್ದಾಗ ನಿಮ್ಮ ಊರಿನಲ್ಲಿ ಯಾವ ಯಾವ ವ್ಯವಹಾರ ಆಗಿವೆ ಎಂದು ಗೊತ್ತಿಲ್ಲ ಎಂದರೆ ಸ್ವಲ್ಪ ಸ್ವಲ್ಪ ಗೊತ್ತಿದೆ ಎಂದು ನುಡಿಯುತ್ತಾರೆ.

9. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಸ್ವಲ್ಪ ಸ್ವಲ್ಪ ಗೊತ್ತಿದೆ ಎಂದು ಬರೆಸಿದ್ದೀರಾ ಎಂದರೆ, ವಿಚಾರ ಗೊತ್ತಿದೆ ಎಂದು ಬರೆಸಿದ್ದೇನೆ.

10. 1999 ರಲ್ಲಿ ಎಷ್ಟು ಜನರಿಗೆ ಯಾವ ಅಧಿಕಾರಿ ಸಾಗುವಳಿ ನೀಡಿದ್ದಾರೆ ಎಂದರೆ, ತಾಲೂಕು ಪಂಚಾಯತಿ ಅಧಿಕಾರಿ 14 ಜನರಿಗೆ ನೀಡಿದ್ದಾರೆ. ಎಲ್ಲರದ್ದೂ ಹೆಸರು ಹೇಳಲು ಆಗುವುದಿಲ್ಲ.

11. ಗೌರಮ್ಮನಿಗೆ ದಿಃ25.01.1999 ರಲ್ಲಿ ಒಂದು ನಿವೇಶನವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ನೀವು ಮೈನರ್ ಆಗಿದ್ದ ಕಾರಣ ನಿಮಗೆ ಈ ದಾವೆಯ ಸಂಪೂರ್ಣ ವಿವರ ಗೊತ್ತಿಲ್ಲ ಎಂದರೆ ಸರಿಯಲ್ಲ.

12. ನೀವು, ಸ್ವಾಮಿನಾಯಕರು ಹಾಗೂ ಅವರ ಕುಟುಂಬದವರು ಸೇರಿಕೊಂಡು ಗೌರಮ್ಮನವರಿಗೆ ತೊಂದರೆ ಕೊಟ್ಟಿದ್ದೀರಾ ಎಂದರೆ ಸರಿಯಲ್ಲ.

13. 5 ನೇ ಪ್ರತಿವಾದಿಗೆ ನಿವೇಶನವನ್ನು ನೀಡಿದ್ದಾರೆ ಎಂದು ಹೇಳುವ ನಿವೇಶನದ ಚಕ್ಕುಬಂದಿ ಗೊತ್ತಿಲ್ಲ. ನಿವೇಶನದ ನಂ.9.

14. ಗೌರಮ್ಮನ ಆಸ್ತಿಯನ್ನು ಲಪಟಾಯಿಸಲು ನೀವು ಹಾಗೂ ಸ್ವಾಮಿನಾಯಕನ ಕುಟುಂಬದವರು ಅನವಶ್ಯಕವಾಗಿ ಕಿರುಕುಳ ನೀಡುತ್ತಿದ್ದೀರಾ ಎಂದರೆ ಸರಿಯಲ್ಲ.

15. ದಿಃ 27.01.1999 ರಂದು ನೀವುಗಳೆಲ್ಲರೂ ಸ್ವಾಮಿನಾಯಕರ ಜೊತೆ ಬಂದು ಗೌರಮ್ಮ ನವರ ಜೊತೆ ಗಲಾಟೆ ಹಲ್ಲೆ ಮಾಡಿದ್ದೀರಿ ಎಂದರೆ ಸರಿಯಲ್ಲ. ಗೌರಮ್ಮ ರವರು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದರು ಎಂದರೆ ಸರಿಯಲ್ಲ.

16. ನಿಮ್ಮ ಮೇಲೆ ದಾಖಲಾದ ಪ್ರಕರಣದಲ್ಲಿ ನೀವು ವಕೀಲರ ಮೂಲಕ ಹಾಜರಿದ್ದೀರಿ ಎಂದರೆ ಸರಿ. ಸದರಿ ಕೇಸ್ ಚಾಲ್ತಿಯಲ್ಲಿದೆಯಾ ಎಂದರೆ, ಅದೇ ಕೇಸ್ ನಲ್ಲಿ ಈಗ ಸಾಕ್ಷಿ ಹೇಳಲು ಬಂದಿದ್ದೇನೆ ಎಂದು ನುಡಿಯುತ್ತಾರೆ.

17. ಪ್ರತಿವಾದಿಗಳು ಎಲ್ಲರೂ ಸೇರಿ ವಾದಿಗೆ ಅನವಶ್ಯಕವಾಗಿ ತೊಂದರೆ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.

18. ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಂದಿಗೂ ಗೌರಮ್ಮ ನವರೇ ಇದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ